# ಹೆಬ್ಬಂಡೆಯ ಮಾತನಾಡಿಸುವ ಪದ್ಯ

**ಕನ್ನಡ** ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಿಲ್ಲ. ಕುವೆಂಪು, ಕಾರಂತರಂಥ ಹಿರಿಯರು ಮಕ್ಕಳ ಸಾಹಿತ್ಯದ ಕೃಷಿ ಮಾಡಿದ್ದಾರೆ. ಆದರೆ, ನನ್ನಂತಹ ಅನೇಕರು ಪಂಥ–ಸಿದ್ಧಾಂತಕ್ಕೆ ಸಿಲುಕಿಕೊಂಡು ಮಕ್ಕಳಿಗಾಗಿ ಬರೆಯದಿದ್ದಕ್ಕೆ ವಿಷಾದವಿದೆ. ಆದರೆ, ಮಕ್ಕಳ ಸಾಹಿತ್ಯದ ಬಗ್ಗೆ ನನಗೆ ವಿಶೇಷ ಪ್ರೀತಿ. ‘ಪ್ರಜಾವಾಣಿ’ಯ ಸಾಪ್ತಾಹಿಕ ಪುರವಣಿ ಹಾಗೂ ‘ಸುಧಾ’ ವಾರಪತ್ರಿಕೆಯಲ್ಲಿನ ಮಕ್ಕಳ ಪುಟಗಳು ನನಗೆ ಅಚ್ಚುಮೆಚ್ಚು. ಮಕ್ಕಳಾಗದೆ ನಾವು ದೊಡ್ಡವರಾಗಿಲ್ಲ. ಬಾಲ್ಯ ಅನ್ನೋದು ಅದ್ಭುತ ಅನುಭವಗಳ ಗಣಿಯೇ ಸರಿ. ಕೃಷ್ಣಮೂರ್ತಿ ಬಿಳಿಗೆರೆ ಅವರ ಕಥೆ–ಕವಿತೆಗಳೂ ನನಗಿಷ್ಟ. ಕನ್ನಡದ ಪ್ರಸಿದ್ಧ ಮಕ್ಕಳ ಕವಿ ಸಿ.ಎಂ. ಗೋವಿಂದ ರೆಡ್ಡಿ ಅವರ ಈ ಕವಿತೆಯಿರುವ ‘ಪದ್ಯ ಹೇಳುವ ಮರ’ ಸಂಕಲನಕ್ಕೆ ಬೆನ್ನುಡಿ ಬರೆದಿದ್ದೆ. ಈ ಕವಿತೆ ಓದಿ ತುಂಬಾ ಖುಷಿಪಟ್ಟಿದ್ದೆ. ಈ ಕವಿತೆಯ ವಿಶೇಷ, ಪರಿಸರ ಕಾಳಜಿ. ಇಡೀ ಜಗತ್ತಿನಲ್ಲಿ ಪರಿಸರ ಕಾಳಜಿಯ ದೊಡ್ಡ ದನಿ ಹೆಣ್ಣುಮಕ್ಕಳದ್ದೇ. ನಮ್ಮ ಈ ಕವಿತೆಯ ಪುಟ್ಟಿ ಕೂಡ ಹೆಣ್ಣುಮಗುವೇ. ಹೆಣ್ಣು ಜೀವ ಸಂವೇದನೆಯ ಸಂಕೇತ. ಜಡವನ್ನೂ ಜೀವವನ್ನಾಗಿ ನೋಡುವ ಶಕ್ತಿ ಹೆಣ್ಣಿಗೆ ಮಾತ್ರ ಸಾಧ್ಯ. ಮಕ್ಕಳ ಸಹಜ ಕುತೂಹಲದಿಂದ ಆಕಾಶವನ್ನು ನೋಡುತ್ತ ಕಲ್ಪಿಸಿಕೊಳ್ಳುವ ಇಲ್ಲಿನ ಪದ್ಯದಲ್ಲಿ, ಮಂಗಳ ಗ್ರಹಕ್ಕೆ ಹೋಗಿ ಹೆಬ್ಬಂಡೆಯನ್ನೇ ಮಾತನಾಡಿಸುವ ಪರಿ ಮನಕರಗಿಸುತ್ತದೆ. ಕವಿತೆ ಮಕ್ಕಳದ್ದೇ. ಪರಿಣಾಮ ಮಾತ್ರ ಭೂಮಂಡಲವನ್ನೇ ಆವರಿಸಿದ್ದು. ಈ ಪರಿಣಾಮ ಬಹಳ ದೊಡ್ಡ ಆಶಯದ್ದು. ಸರಳ ಭಾಷೆಯಲ್ಲಿ ಅಗಾಧತೆಯನ್ನು ಹೇಳುವಲ್ಲಿ ಯಶಸ್ವಿಯಾಗಿರುವ ಕವಿತೆಯಲ್ಲಿ ತಿಣುಕಾಟವಿಲ್ಲ. ಗಿಡ ನೆಡುವ ಕ್ರಿಯೆಯಿದೆಯಲ್ಲ, ಅದು ಈ ಕವಿತೆಯ ದೊಡ್ಡ ಶಕ್ತಿ. ಇದು ಮಕ್ಕಳು–ದೊಡ್ಡವರ ಅರಿವಿನ ಪದ್ಯ. ಎಲ್ಲರನ್ನೂ ಪ್ರೇರೇಪಿಸುವ ಶಕ್ತಿಯುಳ್ಳ ಈ ಪದ್ಯ ಅನೇಕ ಕಾರಣಕ್ಕೆ ನನಗೆ ಇಷ್ಟವಾಗುವ ಪದ್ಯ.

**–ಸುಬ್ಬು ಹೊಲೆಯಾರ್**

# ಮಂಗಳ ಗ್ರಹದಲ್ಲಿ ಪುಟ್ಟಿ



ಕಲೆ: ದರ್ಶನ್ ವಿ.